# ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಬಾಹುಬಲಿ

ಬ್ರ. ಅದ್ವೈತ ಚೈತನ್ಯ

ನಾಡಿನಾದ್ಯಂತ ಪ್ರಸಿದ್ಧವಾಗಿರುವ ಗೊಮ್ಮಟ ತೀರ್ಥಕ್ಷೇತ್ರದಲ್ಲಿ ನಡೆಯುವ ಮಹಾಮಸ್ತಕಾಭಿಷೇಕದ ವಿವರಗಳನ್ನು ನೀಡಿರುವ ಲೇಖಕರು ಮೈಸೂರು ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಗಳಿಗೆ ಜೈನ ಧರ್ಮ ನೀಡಿರುವ ಕೊಡುಗೆ ವಿಶೇಷವಾಗಿ ಗಮನ ಸೆಳೆಯುತ್ತದೆ. ಅವರಲ್ಲಿ ಗೊಮ್ಮಟೇಶ್ವರನ ವಿಗ್ರಹ, ಅದಕ್ಕೆ ಹಿನ್ನೆಲೆಯಾಗಿ ಬಾಹುಬಲಿಯ ಕಥೆ. ಅವನ ಶೌರ್ಯ, ತ್ಯಾಗ, ವೈರಾಗ್ಯಗಳು ಸಾಹಿತ್ಯ, ಶಿಲ್ಪ ಪ್ರಕಾರಗಳಲ್ಲಿ ಮೂರ್ತಿಗೊಂಡ ಬಗೆ ಅಸಾಧಾರಣವಾದದ್ದು. ಶ್ರವಣಬೆಳಗೊಳದ ಗೊಮ್ಮಟೇಶ್ವರ ಪ್ರತಿಮೆ ಅತ್ಯಂತ ಪ್ರಸಿದ್ಧ; ಅದರೊಂದಿಗೆ ವೇಣೂರು, ಕಾರ್ಕಳ, ಬಸ್ತಿ, ಧರ್ಮಸ್ಥಳ ಮೊದಲಾದ ಪ್ರದೇಶಗಳಲ್ಲಿ ಸ್ಥಾಪನೆಗೊಂಡ ಬೃಹದ್ಗಾತ್ರದ ಗೊಮ್ಮಟ ಮೂರ್ತಿಗಳು ಕಾಲದ ಹೊಡೆತಕ್ಕೆ ಸಿಕ್ಕೂ ಬಾಹುಬಲಿಯ ಭವ್ಯ ವ್ಯಕ್ತಿತ್ವವನ್ನು ಹೊರಸೂಸುವಂತಿವೆ.

ಜೈನ ಪರಂಪರೆಯಲ್ಲಿ ಬರುವ ೨೪ ಮಂದಿ ತೀರ್ಥಂಕರರಲ್ಲಿ ಮೊದಲ ತೀರ್ಥಂಕರನಾದ ವೃಷಭನಾಥನ ಕಿರಿಯ ಮಗನೇ ಬಾಹುಬಲಿ. ಅವನಿಗೆ ದೋರ್ಬಲಿ, ಭುಜಬಲಿ, ಕುಕ್ಕುಟೇಶ್ವರ, ಸೌನಂದಿ ಮೊದಲಾದ ಹೆಸರುಗಳಿವೆ. ಆದರೆ, ಕರ್ನಾಟಕದಲ್ಲಿ ಅವನು 'ಗೊಮ್ಮಟ'ನೆಂದು ಹೆಸರುವಾಸಿಯಾದ. ವಿದ್ವಾಂಸರ ಪ್ರಕಾರ ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ಈ ಹೆಸರು ಪ್ರಚಲಿತವಾಯಿತು. ಗೊಮ್ಮಟನೆಂದರೆ ಸುಂದರ, ಚೆಲುವ ಎಂದರ್ಥ; ಬಾಹುಬಲಿ ಮನ್ಮಥನಂತೆ ಸುಂದರನಾಗಿದ್ದ ಎಂದು ಸಾಹಿತ್ಯಕೃತಿಗಳು ಹೇಳುತ್ತವೆ.

ಅತ್ಯಂತ ಪುರಾತನವಾದ ಬಾಹುಬಲಿಯ ಕಥೆ ಸಂಸ್ಕೃತದಲ್ಲಿ ಜಿನಸೇನಾಚಾರ್ಯರಿಂದ ರಚಿತವಾದ 'ಪೂರ್ವಪುರಾಣ' ಹೇಮಚಂದ್ರನ 'ತ್ರಿಷಷ್ಟಿ ಶಲಾಕಾ ಪುರುಷಚರಿತ' ಮೊದಲಾದ ಗ್ರಂಥಗಳಲ್ಲಿ ಕಂಡುಬರುತ್ತದೆ. ಕನ್ನಡದಲ್ಲಿ ಪ್ರಾಚೀನ ಶಾಸನಗಳಿಂದ ಮೊದಲುಗೊಂಡು ಪಂಪ, ಚಾವುಂಡರಾಯ, ರತ್ನಾಕರ ವರ್ಣಿ ಮೊದಲಾದ ಕವಿಗಳು ಬಾಹುಬಲಿಯ ಕಥೆಯನ್ನು ತಮ್ಮ ಕಾವ್ಯಗಳಲ್ಲಿ ವಿಸ್ತಾರವಾಗಿ ಬರೆದಿದ್ದಾರೆ. ಬಾಹುಬಲಿಯ ಕತೆ ಸಂಕ್ಷೇಪವಾಗಿ ಹೀಗಿದೆ:

ಆದಿ ತೀರ್ಥಂಕರ ವೃಷಭನಾಥನಿಗೆ ಇಬ್ಬರು ಮಕ್ಕಳು. ಹಿರಿಯವನು ಭರತ, ಕಿರಿಯವನು ಬಾಹುಬಲಿ. ಬಹಳ ಕಾಲ ಸಂಸಾರ ಸುಖವನ್ನು ಅನುಭವಿಸಿ ಆನಂದದಿಂದಿದ್ದ ವೃಷಭನಾಥ ಒಂದು ದಿನ ತನ್ನ ಆಸ್ಥಾನದಲ್ಲಿ ನೀಲಾಂಜನೆ ಎಂಬುವಳ ನೃತ್ಯವನ್ನು ನೋಡುತ್ತಿದ್ದನು. ಇದ್ದಕ್ಕಿದ್ದಂತೆ ಅವಳು ಮರಣವನ್ನಪ್ಪಿದಳು. ಅದನ್ನು ಕಂಡು ವೈರಾಗ್ಯಪರವಶನಾದ ವೃಷಭನಾಥ ತನ್ನ ಹಿರಿಯ ಮಗ ಭರತನಿಗೆ ಅಯೋಧ್ಯೆಯ ಪಟ್ಟ ಕಟ್ಟಿದ; ಬಾಹುಬಲಿಗೆ ಪೌದನಪುರದ ರಾಜ್ಯಭಾರವನ್ನು ವಹಿಸಿದ. ತಾನು ಸಂಸಾರವನ್ನು ತ್ಯಜಿಸಿ ತಪಸ್ಸಿಗೆ ತೆರಳಿದ.

ಭರತನು ಹೀಗೆ ರಾಜ್ಯವಾಳುತ್ತಿದ್ದಾಗ ಒಂದು ದಿನ ಅವನ ಶಸ್ತ್ರಾಗಾರದಲ್ಲಿ ಒಂದು ಚಕ್ರರತ್ನ ಉದ್ಭವವಾಯಿತು. ದೈವೀ ಅನುಗ್ರಹದಿಂದ ಹುಟ್ಟಿದ ಆ ಚಕ್ರವನ್ನು ತೆಗೆದುಕೊಂಡು ದಿಗ್ವಿಜಯಕ್ಕೆ ಹೊರಟ ಭರತ ಹಲವಾರು ಖಂಡಗಳನ್ನು ಗೆದ್ದು ಮರಳಿ ಬರುತ್ತಾನೆ. ಯಾರೂ ಅವನ ವಿರುದ್ಧ ನಿಲ್ಲುವ ಸಾಹಸ ಮಾಡುವುದಿಲ್ಲ. ಆದರೆ ಅಯೋಧ್ಯೆಗೆ ಮರಳಿ ಬಂದಾಗ ಚಕ್ರರತ್ನ ಪುರ ಪ್ರವೇಶ ಮಾಡದೆ ಹೊರಬಾಗಿಲಲ್ಲೇ ನಿಲ್ಲುವುದು. ಅದಕ್ಕೆ ಕಾರಣ ತಿಳಿದುಬಂತು—ತನ್ನ ತಮ್ಮಂದಿರನ್ನೂ ಗೆದ್ದಲ್ಲದೆ ಭರತನಿಗೆ ಚಕ್ರವರ್ತಿ ಪದವಿ ದೊರಕದು. ತನ್ನ ತಮ್ಮಂದಿರೆಡೆಗೆ ದೂತರನ್ನು ಕಳುಹಿಸಿ ತನಗೆ ಅವರೆಲ್ಲರೂ ಶರಣಾಗುವಂತೆ ಕರೆ ಕಳುಹಿಸಿದ. ಆದರೆ ಅವರೆಲ್ಲ ಶರಣಾಗಲು ನಿರಾಕರಿಸಿ ತಪಸ್ಸಿಗೆ ತೆರಳಿದರು. ಬಾಹುಬಲಿ ಶರಣಾಗಲೊಪ್ಪದೆ ಭರತನನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆ. ಇಬ್ಬರ ಅಹಂಕಾರದಿಂದ ನಡೆಯುವ ಯುದ್ಧದ ಫಲವಾಗಿ ಸಾವಿರಾರು ಸೈನಿಕರ ರಕ್ತ ಹರಿಯುವುದಕ್ಕಿಂತ ಭರತ-ಬಾಹುಬಲಿ ಇಬ್ಬರೇ ಯುದ್ಧ ಮಾಡುವುದು ಸೂಕ್ತ ಎಂದು ಮಂತ್ರಿಗಳು ಸೂಚಿಸಿದಾಗ ಅದಕ್ಕೆ ಇಬ್ಬರೂ ಸಮ್ಮತಿಸುತ್ತಾರೆ. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಲ್ಲಿ ಪರಸ್ಪರ ಸೆಣಸುತ್ತಾರೆ. ನಿಶ್ಚಲಚಿತ್ತನಾಗಿ ರೆಪ್ಪೆಯಿಕ್ಕದೆ ನೋಡುತ್ತ ನಿಂತ ಬಾಹುಬಲಿಯನ್ನು ಎದುರಿಸಲಾಗದೆ ಭರತನ ಕಣ್ಣುಗಳು ಹೊಯ್ದಾಡಿ, ಅವನು ದೃಷ್ಟಿಯುದ್ಧದಲ್ಲಿ ಸೋತುಹೋಗುವನು. ಜಲಯುದ್ಧದಲ್ಲೂ ಬಾಹುಬಲಿಯು ಚಿಮ್ಮಿದ ನೀರಿನ ರಭಸವನ್ನು ಅವನಿಗೆ ಎದುರಿಸಲಾಗಲಿಲ್ಲ. ಕೊನೆಗೆ ಮಲ್ಲಯುದ್ಧದಲ್ಲೂ ಗೆದ್ದ ಬಾಹುಬಲಿಯು ಭರತನನ್ನು ಎರಡೂ ಕೈಗಳಿಂದ ಮೇಲೆತ್ತಿ ಹಿಡಿದು, ಇನ್ನೇನು ನೆಲಕ್ಕೆ ಅಪ್ಪಳಿಸಬೇಕು ಎನ್ನುವಷ್ಟರಲ್ಲಿ ಅವನಿಗೆ ವಿವೇಕ ಮೂಡಿ, 'ಸಾಮ್ರಾಟನಾದ, ಅಣ್ಣನಾದ ಇವನನ್ನು ಈ ರೀತಿ ಅವಮಾನಗೊಳಿಸುವುದು ಸಲ್ಲದು', ಎಂದು ಅವನನ್ನು ಕೆಳಕ್ಕಿಳಿಸುವನು.

ಸೋಲು, ಅಪಮಾನಗಳಿಂದ ಕಿಡಿಕಿಡಿಯಾದ ಭರತ ತನ್ನ ತಮ್ಮನಾದ ಬಾಹುಬಲಿಯನ್ನು ನಾಶಮಾಡಲು ಚಕ್ರರತ್ನವನ್ನೇ ಪ್ರಯೋಗಿಸುವನು. ಚಕ್ರರತ್ನ ಬಾಹುಬಲಿಗೆ ಪ್ರದಕ್ಷಿಣೆ ಬಂದು

ಅವನಿಗೆ ಶರಣಾಗಿ, ಅವನ ಬಲಭಾಗದಲ್ಲಿ ನಿಲ್ಲುವುದು. ಅಣ್ಣನ ರಾಜ್ಯಲೋಭ, ಅಹಂಕಾರ, ಸ್ವಾರ್ಥ, ಅಧಿಕಾರಲಾಲಸೆಗಳು ಅವನನ್ನು ಅಧೋಗತಿಗೆ ತಂದುದನ್ನು ನೆನೆದು ಬಾಹುಬಲಿಗೆ ವೈರಾಗ್ಯ ಉಂಟಾಯಿತು. ಭರತನಿಗೆ, ಅವನು "ನೀನೇ ಸಾಮ್ರಾಟನಾಗಿ ರಾಜ್ಯವನ್ನಾಳು; ನಾನು ತಪಸ್ಸಿಗೆ ತೆರಳುತ್ತೇನೆ", ಎಂದು ಹೇಳಿ ಹೊರಡುವನು. ಲಜ್ಜೆ, ಪಶ್ಚಾತ್ತಾಪಗಳಿಂದ ಕುಗ್ಗಿದ ಭರತನು ತಮ್ಮನ ಕಾಲಿಗೆರಗಿ, ತನ್ನನ್ನು ಬಿಟ್ಟುಹೋಗದಂತೆ ಕೇಳಿಕೊಳ್ಳುವನು. ಆದರೆ. ತನ್ನ ನಿರ್ಧಾರದಿಂದ ಕದಲದ ಬಾಹುಬಲಿ ಆದಿ ತೀರ್ಥಂಕರನ ಬಳಿಗೆ ತೆರಳಿ ಅವನಿಂದ ಜಿನದೀಕ್ಷೆ ಪಡೆದು ಪ್ರತಿಮಾಯೋಗದಿಂದ ಬಹಳ ಕಾಲ ತಪಸ್ಸು ಮಾಡುವನು. ಅವನ ಸುತ್ತ ಹುತ್ತ ಬೆಳೆಯುವುದು; ಬಳ್ಳಿ ಹಬ್ಬುವುದು. ಆದರೂ ಅವನಿಗೆ ಕೇವಲಜ್ಞಾನ ಒದಗಲಿಲ್ಲ. ತಾನು ನಿಂತ ನೆಲ ಭರತನದು ಎಂಬ ಮನಃಕಷಾಯ ಅವನನ್ನು ಕಾಡುತ್ತಿತ್ತು. ಇದನ್ನು ಭರತನಿಗೆ ಆದಿ ತೀರ್ಥಂಕರನು ತಿಳಿಸುವನು. ಆಗ ತಮ್ಮನೆಡೆಗೆ ಧಾವಿಸಿ ಬಂದ ಭರತನು ಅವನ ಕಾಲಿಗೆರಗಿ, "ಈ ಭೂಮಿ ನನ್ನದಲ್ಲ; ಎಲ್ಲವೂ ನಿನ್ನದೇ. ಮನಸ್ಸಿನ ಕಷಾಯವನ್ನು ದಯವಿಟ್ಟು ಬಿಡು', ಎಂದು ಬೇಡುವನು. ಕೂಡಲೇ ಮನಸ್ಸಿನ ಚಿಂತೆ ತೊಲಗಿ, ಬಾಹುಬಲಿಗೆ ಕೇವಲಜ್ಞಾನ ಪ್ರಾಪ್ತವಾಗುವುದು. ಎಲ್ಲ ಐಹಿಕ ಬಂಧನಗಳಿಂದಲೂ ಅವನು ಮುಕ್ತನಾಗುವನು. ಭರತನೂ ಮುಂದೆ ತಪಸ್ಸು ಮಾಡಿ ಕೇವಲಜ್ಞಾನಿಯಾಗುವನು.

ಇದು ಸ್ಥೂಲವಾಗಿ ಬಾಹುಬಲಿಯ ಕತೆ. ಈ ಕತೆ ಅನೇಕ ಕವಿಗಳಿಗೆ, ಶಿಲ್ಪಿಗಳಿಗೆ ಹಾಗೂ ಜೈನ ಮಹಾಪುರುಷರ ಪುರಾಣಗಳನ್ನು ಬರೆದ ಲೇಖಕರಿಗೆ ದೀರ್ಘ ಕಾಲದಿಂದ ಸ್ಫೂರ್ತಿ ನೀಡುತ್ತ ಬಂದಿದೆ. ಅತ್ಯಂತ ಪ್ರಾಚೀನವಾದ ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹ ಕ್ರಿ.ಶ. ಸುಮಾರು ೯೮೧ರಲ್ಲಿ ನಿರ್ಮಾಣವಾಯಿತು ಎನ್ನಲಾಗುತ್ತಿದೆ. ಗಂಗ ದೊರೆ ರಾಚಮಲ್ಲನ ಮಂತ್ರಿಯಾಗಿದ್ದ ಚಾವುಂಡರಾಯನೇ ಶ್ರವಣಬೆಳಗೊಳದ ಈ ಬೃಹತ್ ಮೂರ್ತಿಯನ್ನು ನಿರ್ಮಿಸಿದನು ಎಂದು ಇತಿಹಾಸ ಹೇಳುತ್ತದೆ.

ಈ ಕುರಿತು ಚಾವುಂಡರಾಯನಿಗೆ ಸಂಬಂಧಪಟ್ಟಂತೆ ಒಂದು ಕಥೆಯಿದೆ. ಭರತನು ಪೌದನಪುರದಲ್ಲಿ ಬಾಹುಬಲಿಯ ವಿಗ್ರಹವನ್ನು ನಿಲ್ಲಿಸಿರುವನೆಂದು ಕೇಳಿದ ಚಾವುಂಡರಾಯನ ತಾಯಿ ಕಾಳಲಾದೇವಿ ಅದರ ದರ್ಶನಕ್ಕಾಗಿ ಹಾತೊರೆದಳು. ತನ್ನ ತಾಯಿಯ ಬಯಕೆಯನ್ನು ಈಡೇರಿಸಲು ಚಾವುಂಡರಾಯನು ಪರಿವಾರಸಮೇತನಾಗಿ ಪೌದನಪುರದತ್ತ ಹೊರಟ. ಆ ಪ್ರತಿಮೆಯ ಸುತ್ತ ಸರ್ಪ, ಕುಕ್ಕುಟಗಳ ಹಾವಳಿ ಹೆಚ್ಚಿರುವುದಾಗಿಯೂ, ಅದರ ದರ್ಶನ ಅಸಾಧ್ಯವೆಂದೂ ಅವರಿಗೆ ತಿಳಿದುಬಂತು. ಆದರೆ ಅವನ ತಾಯಿ 'ಕುಕ್ಕುಟೇಶ್ವರ'ನೆಂಬ ಹೆಸರು ಬಂದಿರುವ ಆ ಮೂರ್ತಿಯ ದರ್ಶನ ಮಾಡುವವರೆಗೂ ಆಹಾರ ಸ್ವೀಕರಿಸುವುದಿಲ್ಲವೆಂಬ ವ್ರತವನ್ನು ಕೈಗೊಂಡಳು. ಒಂದು ದಿನ ಕಳ್ವಪ್ಪು ಕ್ಷೇತ್ರದಲ್ಲಿ (ಇಂದಿನ ಶ್ರವಣಬೆಳಗೊಳ) ತಂಗಿದ್ದ ಚಾವುಂಡರಾಯನಿಗೆ ಒಂದು ಕನಸು ಬಿತ್ತು. "ಪೌದನಪುರಕ್ಕೆ ನೀವು ಹೋಗುವುದು ಅಸಾಧ್ಯ. ನಿಮ್ಮ ಭಕ್ತಿಗೆ ಮೆಚ್ಚಿ ಬಾಹುಬಲಿ ಇಲ್ಲೇ ದರ್ಶನ ನೀಡುವನು. ಬೆಳಗಾದೊಡನೆ ನೀನು ಬಾಣದಿಂದ ದೊಡ್ಡ ಬೆಟ್ಟದ ಬೃಹದಾಕಾರದ ಬಂಡೆಯನ್ನು ಭೇದಿಸು. ಅಲ್ಲೇ ನಿನಗೆ ಬಾಹುಬಲಿಯ ದರ್ಶನವಾಗುವುದು" ಎಂದು ಯಕ್ಷಿ ಕನಸಿನಲ್ಲಿ ಹೇಳುವಳು. ಅಂತೆಯೇ ಬೆಳಗಿನಲ್ಲಿ ದೊಡ್ಡಬೆಟ್ಟವನ್ನು ಕಂಡ ಚಾವುಂಡರಾಯ ಅದರಲ್ಲಿ ಕಂಡ ಬೃಹತ್ ಬಂಡೆಯತ್ತ ಬಾಣ ಬಿಡುತ್ತಾನೆ. ಅವನಿಗೆ ಅಲ್ಲೇ ಬಾಹುಬಲಿಯ ದರ್ಶನವಾಯಿತಂತೆ. ಅದೇ ಬಂಡೆಯನ್ನು ಅನಂತರ ಶಿಲ್ಪಿಗಳಿಂದ ಕೆತ್ತಿಸಿ ಬಾಹುಬಲಿಯ ಮೂರ್ತಿಯನ್ನು ಮಾಡಿಸುತ್ತಾನೆ ಚಾವುಂಡರಾಯ.

ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹದ ಭವ್ಯ ಸೌಂದರ್ಯ, ಅದರಿಂದ ಹೊರಹೊಮ್ಮುವ ಉದಾತ್ತತೆ, ತ್ಯಾಗ, ಕರುಣೆ ಶ್ರದ್ಧಾವಂತ ಜೈನರ ಹಾಗೂ ಇತರ ಪ್ರವಾಸಿಗರ ಮನಸ್ಸನ್ನು ಶತಶತಮಾನಗಳಿಂದ ಆಕರ್ಷಿಸಿದೆ. ಗೊಮ್ಮಟೇಶ್ವರನ ವಿಗ್ರಹ ಸ್ಥಾಪನೆಯಾದ ಕೆಲವೇ ವರ್ಷಗಳಲ್ಲಿ ಅದರ ಖ್ಯಾತಿ ನಾಡಿನಲ್ಲೆಲ್ಲ ಹಬ್ಬಿ, 'ದಾನ ಚಿಂತಾಮಣಿ' ಅತ್ತಿಮಬ್ಬೆಗೆ ಅದರ ದರ್ಶನ ಮಾಡಬೇಕೆಂಬ ತೀವ್ರವಾದ ಬಯಕೆ ಉಂಟಾಯಿತಂತೆ. ಆ ಮೂರ್ತಿಯನ್ನು ಕಾಣುವವರೆಗೂ ಆಹಾರವನ್ನು ಸ್ವೀಕರಿಸುವುದಿಲ್ಲವೆಂಬ ಕಠಿಣ ವ್ರತವನ್ನು ಹೊತ್ತ ಅತ್ತಿಮಬ್ಬೆ, ಉತ್ತರ ಕರ್ನಾಟಕದಿಂದ ಶ್ರವಣಬೆಳಗೊಳದವರೆಗೂ ಹಾಗೆಯೇ ನಿರಾಹಾರಿಯಾಗಿ ಬಂದಳು.ಅವಳು ಗೊಮ್ಮಟೇಶ್ವರನ ಬಳಿಗೆ ಬಂದು ನಿಂತಾಗ, ಆಗ ಅಕಾಲವಾಗಿದ್ದರೂ ಚೆನ್ನಾಗಿ ಮಳೆಯಾಯಿತು ಎಂದು ರನ್ನನ 'ಅಜಿತನಾಥ ಪುರಾಣ'ದಲ್ಲಿ ಹೇಳಲಾಗಿದೆ.

ಕ್ರಿ.ಶ. ೧೨ನೆಯ ಶತಮಾನದಲ್ಲಿ ರಚಿತವಾದ ಶಾಸನವೊಂದರಲ್ಲಿ ಕವಿ ಬೊಪ್ಪಣ ಪಂಡಿತನು ಗೊಮ್ಮಟೇಶ್ವರ ಮೂರ್ತಿಯ ಸೌಂದರ್ಯ, ವೈಭವಗಳನ್ನು ಅನ್ಯಾದೃಶವಾಗಿ ಚಿತ್ರಿಸಿದ್ದಾನೆ. ಈ ಸ್ತುತಿಯಲ್ಲಿ ಬರುವ ಒಂದು ಪದ್ಯವು ಈ ಲೇಖನಕ್ಕೆ ಶುಭಾಂತ್ಯವನ್ನು ನೀಡಬಲ್ಲ ಸುಂದರ ಕವಿತೆಯಾಗಿದೆ:

**ಅತಿತುಂಗಾಕೃತಿಯಾದೊಡಾಗದದಟೊಳ್ ಸೌಂದರ್ಯಮೌನ್ನತ್ಯಮುಂ**
**ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ ।**
**ನುತಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ**
**ಕ್ಷಿತಿ ಸಂಪೂಜ್ಯಮೋ ಗೊಮ್ಮಟೇಶ್ವರ ಜಿನಶ್ರೀರೂಪಮಾತ್ಮೋಪಮಂ ॥**

**"ಅತ್ಯುನ್ನತವಾದ ಆಕೃತಿಯಾದರೆ ಅದರಲ್ಲಿ ಸೌಂದರ್ಯವಿರ**

**ಬೇಕೆಂದೇನೂ ಇಲ್ಲ; ಔನ್ನತ್ಯದೊಂದಿಗೆ ಸೌಂದರ್ಯವೂ ಕೂಡಿದ್ದರೆ ಅವರಲ್ಲೂ ಸಹ ಅತಿಶಯವಿರಬೇಕೆಂದೇನೂ ಇಲ್ಲ; ಔನ್ನತ್ಯ, ಸೌಂದರ್ಯ ಇವುಗಳೊಂದಿಗೆ ಅತಿಶಯವನ್ನೂ ಮೈಗೂಡಿಸಿಕೊಂಡಿರುವ, ಶ್ರೀಗೊಮ್ಮಟ ಜಿನೇಶ್ವರನ ರೂಪಸಂಪತ್ತು ಭೂಮಿಯಲ್ಲಿ ಎಷ್ಟೊಂದು ಪೂಜ್ಯವಾಗಿದೆ! ಅವನಿಗೆ ಅವನೇ ಉಪಮೆ!"**


ಗ್ರಂಥ ಋಣ:

೧. **ಕನ್ನಡ ವಿಶ್ವಕೋಶ, ಸಂಪುಟ ೬:** ಮೈಸೂರು ವಿಶ್ವವಿದ್ಯಾನಿಲಯ

೨. **ಶ್ರವಣಬೆಳ್ಗೊಳ** – ಷ. ಶೆಟ್ಟರ; ರೂವಾರಿ ಪ್ರಕಾಶನ, ಧಾರವಾಡ

೩. **ಕನ್ನಡ ಜೈನ ವಾಙ್ಮಯ ವಿಚಾರ** – ಬಿ.ಬಿ.ಮಹೀಶವಾಡಿ; ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ

೪. **ಜೈನಧರ್ಮ** – ಮಿರ್ಜಿ ಅಣ್ಣಾರಾಯ; ಶಾಂತಿ ಸೇವಾಸದನ, ಶೇಡಬಾಳ

೫. **ಸಮಾಲೋಕನ** – ತೀ.ನಂ. ಶ್ರೀಕಂಠಯ್ಯ; ಶಾರದಾ ಮಂದಿರ, ಮೈಸೂರು

೬. **ಶಾಸನ ಸಂಗ್ರಹ** – ಎಂ.ಎಂ ಅಣ್ಣಿಗೇರಿ, ಆರ್. ಶೇಷಶಾಸ್ತ್ರಿ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು


### ಮಹಾಮಸ್ತಕಾಭಿಷೇಕ — ಒಂದು ಕಿರುಪರಿಚಯ

ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ೧೨ ವರ್ಷಗಳಿಗೊಮ್ಮೆ ನಡೆಯುತ್ತದೆ. ಕ್ರಿ.ಶ. ೯೮೧ರಲ್ಲಿ ಸ್ಥಾಪನೆಗೊಂಡ ಬಾಹುಬಲಿಯ ವಿಗ್ರಹಕ್ಕೆ ಅದನ್ನು ನಿರ್ಮಿಸಿದ ಗಂಗ ರಾಜನ ಮಂತ್ರಿ ಚಾವುಂಡರಾಯನೇ ಮೊತ್ತಮೊದಲ ಮಹಾಮಸ್ತಕಾಭಿಷೇಕ ಮಾಡಿಸಿದ. ಅನಂತರ, ಅದರ ನೆನಪಿನಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಈ ಉತ್ಸವ ನಡೆಯುತ್ತ ಬಂದಿದೆಯೆಂದು ಪ್ರತೀತಿ. ಕ್ರಿ.ಶ. ೧೩೯೮ರಲ್ಲಿ ಇಂತಹ ಒಂದು ಬೃಹತ್ ಉತ್ಸವ ನಡೆದಿರುವುದಾಗಿ ಶಾಸನವೊಂದರಲ್ಲಿ ಉಲ್ಲೇಖವಾಗಿದೆ. ಸಾಹಿತ್ಯಕೃತಿಗಳಲ್ಲಿ ಹಾಗೂ ಹಲವಾರು ಶಾಸನಗಳಲ್ಲಿ ಇಂತಹ ಹಲವು ಉತ್ಸವಗಳು ನಡೆದಿರುವುದಾಗಿ ಹೇಳಿದೆ.

ಈ ಬಾರಿ ಮಹಾಮಸ್ತಕಾಭಿಷೇಕ ೨೦೦೬ ಫೆಬ್ರವರಿ ೮ರಿಂದ ೧೯ರ ಅವಧಿಯಲ್ಲಿ ನಡೆಯಲಿದೆ. ಜನವರಿ ೨೨ರಂದು ಪ್ರಾರಂಭವಾಗುವ ಈ ಕಾರ್ಯಕ್ರಮದಲ್ಲಿ ಸುಮಾರು ೩೦ ಲಕ್ಷ ಯಾತ್ರಿಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಈ ಉತ್ಸವಕ್ಕೆ ಅಗತ್ಯವಾಗಿ ಬೇಕಾದ ಸಿದ್ಧತೆಗಳೆಲ್ಲವೂ ಬೃಹತ್ ಪ್ರಮಾಣದಲ್ಲಿ ನಡೆದಿವೆ. ಎಲ್ಲ ಕಾರ್ಯಕ್ರಮಗಳ ಒಟ್ಟು ವೆಚ್ಚ ಸುಮಾರು ೨೦೦ ಕೋಟಿ ರೂ.ಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಪ್ರಧಾನ ಕಾರ್ಯಕ್ರಮಕ್ಕೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನ ಮಂತ್ರಿ ಮೊದಲಾದ ಗಣ್ಯರು ಆಗಮಿಸುವ ನಿರೀಕ್ಷೆಯಿದೆ.

ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕವು ಹಾಲು, ಎಳನೀರು, ಕೇಸರಿ, ಅರಶಿನ ಇತ್ಯಾದಿ ದ್ರವ್ಯಗಳಿಂದ ನಡೆಯುವುದು. ಆರಂಭದಲ್ಲಿ ನಡೆಯುವ ಜಲಯಾತ್ರೆಯಲ್ಲಿ ೧೦೮ ತೀರ್ಥಗಳಿಂದ ಸಂಗ್ರಹಿಸಿದ ನೀರನ್ನು ಹೊತ್ತ ಮೆರವಣಿಗೆ ನಡೆಯುವುದು. ಅನಂತರ ಈ ನೀರಿನಿಂದ ಅಭಿಷೇಕ ನಡೆಯುವುದು. ಜಿನನಾಥನ ಜನ್ಮಮುಹೂರ್ತದಲ್ಲಿ ಇಂದ್ರನೇ ಬಂದು ಅವನಿಗೆ ಸ್ನಾನ ಮಾಡಿಸಿದ ಕಥೆಯ ಹಿನ್ನೆಲೆ ಈ ಆಚರಣೆಯಲ್ಲಿದೆ. ವಿಗ್ರಹಕ್ಕೆ ಅಭಿಷೇಕ ಮಾಡಿದಾಗ ನೆಲಕ್ಕೆ ಬೀಳುವ ನೀರು ಅತ್ಯಂತ ಪವಿತ್ರವಾದ ಪ್ರಸಾದವೆಂದು ಜೈನ ಪುರಾಣಗ್ರಂಥವಾದ 'ತ್ರಿಷಷ್ಟಿ ಶಲಾಕಾಪುರುಷ ಚರಿತ'ವನ್ನು ಬರೆದ ಹೇಮಚಂದ್ರ ಕವಿ ಹೇಳುತ್ತಾನೆ.

ಈ ಬಾರಿಯ ಉತ್ಸವದ ಸಂದರ್ಭದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರ, ಅಂಗವಿಕಲರಿಗೆ ಕೃತಕ ಅಂಗಗಳ ವಿತರಣೆ ಹಾಗೂ ಜೋಡಣೆ, ಶಿಶು ಆರೋಗ್ಯ ತಪಾಸಣೆ ಮೊದಲಾದ ಸೇವಾ ಕಾರ್ಯಗಳನ್ನೂ ಏರ್ಪಡಿಸಲಾಗಿದೆ. ಇದಲ್ಲದೆ ಧಾರ್ಮಿಕ ಪ್ರವಚನಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಹಮ್ಮಿಕೊಳ್ಳಲಾಗಿದೆ.

### ಚಾವುಂಡರಾಯ ಮಾಡಿದ ಮಹಾಮಸ್ತಕಾಭಿಷೇಕ

ಗೊಮ್ಮಟೇಶ್ವರನ ಬೃಹತ್ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಚಾವುಂಡರಾಯನ ಮನಸ್ಸಿನಲ್ಲಿ ಅಹಂಕಾರ ಮೊಳೆಯಿತು. ಗೊಮ್ಮಟನ ಮಹಾಮಸ್ತಕಾಭಿಷೇಕ ಮಾಡಬೇಕೆಂದು ಅವನಿಗೆ ಆಲೋಚನೆ ಬಂದಿತು. ಅವನು ಕೊಡಗಟ್ಟಲೆ ಹಾಲು ಸುರಿದರೂ ಆ ಬೃಹತ್‌ಮೂರ್ತಿಯ ತಲೆಗೂದಲು ಕೂಡ ಒದ್ದೆಯಾಗಲಿಲ್ಲ. ಇದರಿಂದ ಕಳವಳಕ್ಕೊಳಗಾದ ಚಾವುಂಡರಾಯ ದಾರಿಗಾಣದೆ ಚಿಂತಿಸುತ್ತಿದ್ದ. ಆಗ ಒಬ್ಬಳು ಮುದುಕಿ ಒಂದು ಗುಳ್ಳೇಕಾಯಿಯಲ್ಲಿ ಹಾಲು ತುಂಬಿಕೊಂಡು ಬಂದು ತಾನು ಅಭಿಷೇಕವನ್ನು ಪೂರ್ಣಗೊಳಿಸುವುದಾಗಿ ಹೇಳುತ್ತಾಳೆ. ಚಾವುಂಡರಾಯನಿಗೆ ಅವಳ ಮಾತಿನಲ್ಲಿ ನಂಬಿಕೆ ಬರಲಿಲ್ಲ. ಆದರೂ ಬೇರೇನು ಮಾಡಲೂ ತೋಚದೆ, "ಆಗಲಿ, ಮಾಡಿ ತೋರಿಸು ನೋಡೋಣ", ಎನ್ನುತ್ತಾನೆ. ಅವಳು ತಾನು ತಂದಿದ್ದ ಹಾಲನ್ನು ಗೊಮ್ಮಟೇಶ್ವರನ ಮೇಲೆ ಸುರಿದಾಗ ಪರಮಾಶ್ಚರ್ಯ! ಅದುವರೆಗೆ ಎಷ್ಟು ಹಾಲು ಸುರಿದರೂ ಅಭಿಷೇಕವಾಗದಿದ್ದದ್ದು, ಈಗ ಮುದುಕಿ ತಂದಿದ್ದ ಹಾಲಿನ ತೊರೆಯಾಗಿ ಉಕ್ಕಿ ಹರಿದು, ಗೊಮ್ಮಟನ ಪಾದದವರೆಗೂ ಇಳಿದು ಬಂತು. ಅಭಿಷೇಕ ಪೂರ್ಣಗೊಂಡಿತು. ಆ ಗುಳ್ಳೇಕಾಯಿ ಅಜ್ಜಿ ಬೇರೆ ಯಾರೂ ಅಲ್ಲ; ತನ್ನ ಅಹಂಕಾರವನ್ನು ಅಳಿಸಲು ಬಂದ ಪದ್ಮಾವತಿ ಯಕ್ಷಿಯೇ ಎಂದು ಚಾವುಂಡರಾಯನಿಗೆ ತಿಳಿಯಿತು. ಭಕ್ತಿಯಿಂದ ಅರ್ಪಿಸಿದ ಹಾಲಿನಿಂದ ನಿಜವಾದ ಅಭಿಷೇಕವಾಗುವುದಲ್ಲದೆ, ಅಹಂಕಾರದ ವೈಭವದಿಂದಲ್ಲ ಎಂಬುದನ್ನು ಈ ಪ್ರಸಂಗ ತೋರಿಸುತ್ತದೆ. ಇಂದಿಗೂ ಅಜ್ಜಿಯ ಮೂರ್ತಿಯನ್ನು ಗೊಮ್ಮಟನ ವಿಗ್ರಹದಿಂದ ಸ್ವಲ್ಪ ದೂರದಲ್ಲಿ ಕಾಣಬಹುದು.